


## ಆಕಳ ಹೊಟ್ಟೇಲಿ ಕ್ವಿಂಟಾಲ್ ಪ್ಲಾಸ್ಟಿಕ್

ಪಟ್ಟಣದ ಬೀದಿಗಳಲ್ಲಿ ಡೊಳ್ಳು ಹೊಟ್ಟೆಯ ಹಸುಗಳನ್ನು ಕಂಡಾಗ ಕರುಬುವಂತಾಗುತ್ತಿತ್ತು. ಎಷ್ಟೇ ಮೇವು, ನೀರು ಕೊಟ್ಟರೂ ಹಳ್ಳಿಯಲ್ಲಿನ ಹಸುಗಳು ಹೀಗೆ ಗುಡಾಣದಂತಹ ಉಬ್ಬು ಹೊಟ್ಟೆಯನ್ನು ಬೆಳೆಸಿಕೊಳ್ಳುತ್ತಿರಲಿಲ್ಲ. ಕ್ರಮೇಣ, ಪಟ್ಟಣದ ಹಸುಗಳ ಹೊಟ್ಟೆ ಉಬ್ಬುವ ಮರ್ಮ, ಅವುಗಳ ಹೊಟ್ಟೆಯೊಳಗೆ ಸೇರಿದ ಪ್ಲಾಸ್ಟಿಕ್ ಹೊರತು ಮೇವಲ್ಲ ಎಂಬುದು ಅರಿವಿಗೆ ಬಂತು.

ಹಸುಗಳ ಚರ್ಮವೇನಾದರೂ ಪಾರದರ್ಶಕವಾಗಿದ್ದಿದ್ದರೆ ಅವುಗಳ ಹೊಟ್ಟೆಯಲ್ಲಿನ ಪ್ಲಾಸ್ಟಿಕ್ ಕಸದ ದಾಸ್ತಾನು, ನಾಗರಿಕ ಸಮಾಜ ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡುತ್ತಿತ್ತು. ಏಕ ಬಳಕೆಯ ಪ್ಲಾಸ್ಟಿಕ್‌ನಿಂದಾಗಿ ಹಸುಗಳೂ ಸೇರಿದಂತೆ ಬಹುತೇಕ ಎಲ್ಲಾ ಪ್ರಾಣಿಪಕ್ಷಿಗಳು ನರಕದ ಬಾಳು ಬಾಳುತ್ತಿವೆ. ಇವುಗಳ ಮೂಕರೋದನೆ ಸಂವೇದನಾಹೀನರಾದ ನಮ್ಮ ದಪ್ಪ ಚರ್ಮವನ್ನು ಸೀಳಿ ಎದೆಗೆ ನಾಟಲಾರದು.

ಅಂದಹಾಗೆ ಜೀವಿಗಳ ಮೇಲೆ ಪ್ಲಾಸ್ಟಿಕ್ ಬಳಕೆಯ ದುಷ್ಪರಿಣಾಮವನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸುವ ಈ ಕಲಾಕೃತಿ ಕಂಡುಬಂದಿದ್ದು ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ. ಪಟ್ಟಣದ ಪುರಸಭೆಯು ನಗರದ ಪ್ರಮುಖ ಬೀದಿಯಲ್ಲಿ ಇಂತಹದ್ದೊಂದು ರಚನೆಯನ್ನು ಇರಿಸಿ ಜಾಗೃತಿ ಮೂಡಿಸಲಾಗುತ್ತಿದೆ. ಪ್ರಸ್ತುತ 'ಆಕಳ ಹೊಟ್ಟೇಲಿ ಅಚ್ಚೇರು ಬಂಗಾರ' ಎಂಬ ಹಳೆಯ ಗಾದೆಮಾತನ್ನು ಬದಲಾಯಿಸಿ 'ಆಕಳ ಹೊಟ್ಟೇಲಿ ಕೆಜಿಗಟ್ಟಲೆ ಪ್ಲಾಸ್ಟಿಕ್ ಕಸ' ಎಂಬಂತಾಗುವ ಮಟ್ಟಿಗೆ ನಮ್ಮ ಆಧುನಿಕ ಬದುಕು ಬಂದು ನಿಂತಿದೆ.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

## 'ಮೇಲಕರಿಷಿಣ ಹಚ್ಚಿದ ಪಾತರಗಿತ್ತಿ'...

ಬಾದಾಮಿ ಚಾಲುಕ್ಯರ ಇತಿಹಾಸವನ್ನು ಮೆಲುಕು ಹಾಕುತ್ತಾ, ವೈವಿಧ್ಯಮಯ ಆಕಾರದ ಕಲ್ಲು ಬಂಡೆಗಳ ನಡುವೆ ಸಾಗುತ್ತಿದ್ದೆ. ಸಾಮಾನ್ಯಕ್ಕಿಂತ ದೊಡ್ಡ ಗಾತ್ರದ ಚಿಟ್ಟೆಯೊಂದು ಕಣ್ಣಮುಂದೆ ಸಾಗಿತು. ಅದು ಬೇಂದ್ರೆ ಅಜ್ಜ ವರ್ಣಿಸಿದ 'ಮೇಲಕರಿಷಿಣ ಹಚ್ಚಿದ ಪಾತರಗಿತ್ತಿ'ಯಂತಿತ್ತು.

ಈ ಚಿಟ್ಟೆಯನ್ನು 1907ರಲ್ಲಿ ಚಾರ್ಲ್ಸ್ ಥಾಮಸ್ ಬಿಂಗ್ಹಾಮ್ ಮೊದಲಿಗೆ ಹೊರಜಗತ್ತಿಗೆ ಪರಿಚಯಿಸಿದರು. ಇಂಗ್ಲಿಷ್‌ನಲ್ಲಿ ಸದರನ್ ಬರ್ಡ್‌ವಿಂಗ್ ಎಂದು ಕರೆಸಿಕೊಳ್ಳುವ ಇದರ ವೈಜ್ಞಾನಿಕ ಹೆಸರು ಟ್ರಾಯ್ಡೆಸ್ ಮಿನೊಸ್. ಸಹ್ಯಾದ್ರಿ ಚಿಟ್ಟೆಯಂತಲೂ ಕರೆಸಿಕೊಳ್ಳುವ ಇದು ಪಶ್ಚಿಮಘಟ್ಟದ ಸ್ಥಳೀಯ ಪ್ರಭೇದ. ಆದಾಗ್ಯೂ ಈ ಕಲ್ಲು ಬಂಡೆಗಳ ಕುರುಚಲು ಕಾಡಿನಲ್ಲಿಯೂ ಕಾಣಿಸಿಕೊಂಡಿದ್ದು ಅಚ್ಚರಿ ಮೂಡಿಸಿತು. ನಿತ್ಯ ಹರಿದ್ವರ್ಣ ಕಾಡು ಮತ್ತು ಕುರುಚಲು ಕಾಡುಗಳ ಪರಿಸರಕ್ಕೆ ಹೊಂದಾಣಿಕೆಯಾಗುವ ಜೀವನಕ್ರಮ ಅಳವಡಿಸಿಕೊಂಡಿದೆಯೇ? ಗೊತ್ತಿಲ್ಲ. ಮಂಗಳೂರಿನ ಅಧಿಕಾರಿಯೊಬ್ಬರು, 'ಉತ್ತರ ಕರ್ನಾಟಕಕ್ಕೆ ಬಂದು ಅಲ್ಲಿನ ರೊಟ್ಟಿ ಮತ್ತು ಖಾರದ ಪಲ್ಯ ತಿನ್ನೋದು ತುಂಬಾ ಕಷ್ಟ ಮಾರಾಯ್ರೆ' ಎನ್ನುವಾಗ, ಸಹ್ಯಾದ್ರಿ ಚಿಟ್ಟೆಯ ಹೊಂದಾಣಿಕೆಗೆ ಏನೆನ್ನಬೇಕು? ಅದೂ ಗೊತ್ತಿಲ್ಲ.

ದೇಶದ 2ನೇ ಅತಿ ದೊಡ್ಡ ಚಿಟ್ಟೆ ಪ್ರಭೇದ ಅನಿಸಿಕೊಂಡಿರುವ ಇದನ್ನು 'ಕರ್ನಾಟಕ ರಾಜ್ಯ ಚಿಟ್ಟೆ'ಯೆಂದು ಘೋಷಿಸಲಾಗಿದೆ. ಕೆಂಪು ಮತ್ತು ಹಳದಿ ಬಣ್ಣ ಹೊಂದಿರುವುದು, ಕರ್ನಾಟಕ ಧ್ವಜದ ಸಂಕೇತವಾಗಿ ಮತ್ತು ಸ್ಥಳೀಯ ಪ್ರಭೇದವಾಗಿರುವ ಕಾರಣಕ್ಕೆ 'ರಾಜ್ಯದ ಚಿಟ್ಟೆ' ಎಂದು ಗುರುತಿಸಲಾಗಿದೆಯೇನೋ...

–ರವಿ ಸೋ. ದೇವರಡ್ಡಿ, ಮುಂಡರಗಿ





## 'ಗಂಜ್ ವಗ್ಗಣೆ' ಬಲುರುಚಿ

ರಾಯಚೂರು ಸಾಹಿತಿಕವಾಗಿ, ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ ವಿಶೇಷವಾಗಿ ಗುರುತಿಸಿಕೊಂಡಿದ್ದು, ಇದರ ಜೊತೆ ಸವಿರುಚಿಯ ತಾಣವೂ ಆಗಿದೆ. ರೊಟ್ಟಿ ಊಟದ ಪ್ರಮುಖ ಆಕರ್ಷಣೆಯೊಂದಿಗೆ ರಾಯಚೂರು ನಗರದ 'ಗಂಜ್ ವಗ್ಗಣೆ'ಯು ಎಂಥವರನ್ನು ಸಹ ಮೋಡಿ ಮಾಡಿಬಿಡುತ್ತದೆ. ಇಲ್ಲಿನ ವಗ್ಗಣೆಯ ರುಚಿಗೆ ಮನಸೋಲದವರೇ ಇಲ್ಲ.

ಗಂಜ್ ಸರ್ಕಲ್‌ನಿಂದ ಎಪಿಎಂಸಿ ಕಚೇರಿಯ ಎಡ ಭಾಗದಲ್ಲಿ ಸಾಲು ಸಾಲು ವಗ್ಗಣೆ ಬಡಿಸುವ ಹೋಟೆಲ್‌ಗಳಿವೆ. ಇಲ್ಲಿ ಕಳೆದ ಐವತ್ತು ವರ್ಷಗಳಿಂದ ರುಚಿಕಟ್ಟಾದ ವಗ್ಗಣೆ ನೀಡುವ ಹೋಟೆಲ್‌ಗಳೂ ಇವೆ. ಬಿಸಿ ಬಿಸಿ ವಗ್ಗಣೆಯ ಜೊತೆ ಮಿರ್ಚಿ, ಬೆಳ್ಳುಳ್ಳಿ ಖಾರದ ಪುಡಿ, ಮೊಸರು ನೀಡುತ್ತಾರೆ. ಇವುಗಳನ್ನು ಸೇರಿಸಿಕೊಂಡು ತಿಂದರೆ ಆಹಾ... ಸ್ವರ್ಗಕ್ಕೆ

